# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಮಹೀಂದ್ರ ಮಹಾಭಿಷ

ಕವಿ

## ಶಿವಕುಮಾರ ಬಿ.ಎ. ಅಳಗೋಡು

ಅಂತರಜಾಲ ಆವೃತ್ತಿ ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦

ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಿಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಮಹಾಭಾರತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

೨೦೧೭ರಲ್ಲಿ ಕವಿಯಿಂದ ಪ್ರಕಟಿತ ಕೃತಿ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೧೧

**ಪಾತ್ರಗಳು:**

ಮಹಾಭಿಷ, ಬ್ರಹ್ಮ, ದೇವೇಂದ್ರ, ಗಂಗೆ, ಕುಮುದಾ, ದುರ್ಜಯ (ಕೆಂಪು ಕೇದಗೆ/ಮಧ್ಯಮ ಮುಂಡಾಸು), ವೃದ್ಧ ಬ್ರಾಹ್ಮಣ, ವೃದ್ಧ ಸುಮಂತ್ರ, ದೇವತೆಗಳು

**ಕಥಾ ಸಾರಾಂಶ:**

ಸೂರ್ಯಾನ್ವಯದಿ ಮಹಾಸದ್ಗುಣಿಯಾದ ಮಹಾಭಿಷ ಎಂಬ ರಾಜ ರಾಜ್ಯವಾಳುತ್ತಿರುತ್ತಾನೆ. (ಶ್ರೀಮನ್ಮಹಾಭಾರತ, ಪು.ಚೂ, ಮ.ಪಾ.ಸಂ ಎಲ್ಲಿಯೂ ಮಹಾಭಿಷನ ನಾಡಿನ ಉಲ್ಲೇಖ ದೊರೆತಿಲ್ಲ) ಇಕ್ಷ್ವಾಕು ವಂಶಸ್ಥನಾದ ಈತ ಓಲಗಸ್ಥನಾದಾಗ ತನ್ನ ವೃದ್ಧ ಮಂತ್ರಿಯಾದ ಸುಮಂತ್ರನೊಡನೆ, ಸಶರೀರಿಯಾಗಿ ಸ್ವರ್ಗಲೋಕವನ್ನು ಸೇರಿ ಅಲ್ಲಿನ ಸುಖೋಪಭೋಗಗಳನ್ನು ಅನುಭವಿಸುವ ಮಹತ್ತರವಾದ ಆಸೆಗೆ ಉಪಾಯವನ್ನು ಕೇಳುತ್ತಾನೆ. ರಾಜನ ಈ ಪರಿಯ ಆಸೆ ಮಂತ್ರಿಗೆ ತುಸು ಹೊಸತೆನಿಸಿದರೂ ಅವನ ಶ್ರೇಷ್ಟತೆಯ ಅರಿವಿದ್ದುದರಿಂದ ತನಗೆ ತಿಳಿದಷ್ಟನ್ನ ತಿಳಿಸುತ್ತಾನೆ. ಒಂದುಸಾವಿರ ಅಶ್ವಮೇಧ, ನೂರು ರಾಜಸೂಯಾಧ್ವರಗಳನ್ನು ಮಾಡಿ ಯಥೇಚ್ಚವಾಗಿ ದಾನಧರ್ಮಾದಿಗಳನ್ನು ಮಾಡಿದರೆ, ನಿನ್ನಾಸೆ ಖಂಡಿತಾ ನೆರವೇರುತ್ತದೆ ಎನ್ನುತ್ತಾನೆ. (ಇಲ್ಲಿ ಇಷ್ಟೊಂದು ದೀರ್ಘಾವಧಿಯಲ್ಲಿ ನಡೆಯುವ ಯಾಗದ ಕುರಿತು, ಅದರ ಅವಧಿಯ ಕುರಿತೂ ಉಲ್ಲೇಖಗಳಿಲ್ಲ. ತಿಂಗಳಿಗೊಂದರಂತೆ ಅಶ್ವಮೇಧ, ರಾಜಸೂಯಗಳನ್ನು ಮಾಡಬಹುದು ಎಂದು ಕೆಲವರು ಹೇಳಿದ್ದನ್ನ ಕೇಳಿದ್ದೇನೆ. ಹಾಗೂ ಬಳಸಿಕೊಳ್ಳಬಹುದು) ಆತನ ಮಾತಿನಿಂದ ಸಂತುಷ್ಟನಾದ ಅರಸ ಯಾಗ ಮಾಡಲು ಯಾಗಶಾಲೆಗೆ ತೆರಳುತ್ತಾನೆ. ಯಾಗಗಳನ್ನು ನಡೆಸುತ್ತಲೇ ಹಲವು ವರ್ಷಗಳು ಗತಿಸುತ್ತವೆ. ಆ ಬಳಿಕ ಯಾಗದ ವಿಷಯ ಕೇಳಿ ಬ್ರಾಹಣರೆಲ್ಲರೂ (ಪ್ರಯೋಗದಲ್ಲಿ ಒಬ್ಬ ವೃದ್ಧಬ್ರಾಹ್ಮಣ) ಮಹಾಭಿಷನ ಯಾಗಶಾಲೆಗೆ ಬಂದು ಅವನಿಂದ ದಾನವನ್ನು ಪಡೆದು ಮನದುಂಬಿ ಹರಸಿ ತೆರಳುತ್ತಾರೆ. ರಾಜ ಬ್ರಾಹ್ಮಣರನ್ನು ಕಳುಹಿಸಿ ಶ್ರೀಹರಿಯ ದೇಗುಲಕ್ಕೆ ತೆರಳುತ್ತಾನೆ. ಅದೇ ಸಮಯಕ್ಕೆ ಗಂಧರ್ವ ಕನ್ಯೆ ಕುಮುದಾ ಎನ್ನುವವಳು ವನವಿಹಾರ, ಜಲಕೇಳಿಗೆ ಭೂಲೋಕಕ್ಕೆ ಬರುತ್ತಾಳೆ. ಮತ್ತೊಂದೆಡೆಯಲ್ಲಿ ದುರ್ಜಯನೆಂಬ ಖಳ ವಿರಹವೇದನೆಯ ನಿವಾರಣೆಗೆ ಕುಸುಮಾಕ್ಷಿಯರನ್ನರಸುತ್ತಾ ವನಗಮನ ಮಾಡುತ್ತಾನೆ. (ಈತ ಹೇಳಿಕೊಳ್ಳಲು ಯಾವುದೇ ಹೆಸರಿಲ್ಲದ, ಮಹತ್ವಾಕಾಂಕ್ಷಿಯಾದ ಖಳ. ಭವಿಷ್ಯದಲ್ಲಿ ಮಹಾಭಿಷನ ನಾಡಿನ ಅರಸನಾಗಬೇಕೆಂಬ ಉತ್ಕಟಾಕಾಂಕ್ಷೆಯಲ್ಲಿರುತ್ತಾನೆ) ವನಕ್ಕೆ ಬಂದ ಧೂರ್ತ, ಖೇಚರಕನ್ಯೆಯನ್ನು ಬಲವಂತದಿಂದ ಎಳೆಯುವಾಗ ಮಾರ್ಗಮಧ್ಯದಲ್ಲಿ ಮಹಾಭಿಷ ಅದನ್ನು ಕಂಡು, ದುರ್ಜಯನನ್ನು ಕೊಲ್ಲುತ್ತಾನೆ. ತನ್ನನ್ನು ವರಿಸು ಎಂದು ಕೇಳಿಕೊಳ್ಳುವ ಕುಮುದಳನ್ನು ಮಹಾಭಿಷ ಅಲ್ಲಗಳೆದು ಕಳುಹಿಸಿಕೊಡುತ್ತಾನೆ.

ರಾಜನೋರ್ವನೇ ಪುರದಲ್ಲಿ ಕುಳಿತಿರಲು, ವಿರಚಿತ ಯಾಗಫಲ ಪೂರ್ಣವಾಗಿ ಫಲಿಸಿ ಆ ಪುಣ್ಯ ಅಂಬರದ ಕಡೆ ಚಲಿಸಿ, ದಿವ್ಯವಾದ ಒಂದು ತೇಜಸ್ಸಾಗುತ್ತ ದೃಷ್ಟಿಗೋಚರಕ್ಕೆ ತುಸು ಅಸ್ಪಷ್ಟವೆನಿಸಿ ಭುವಿಯ ಕಡೆ ಬಂದು ಮಹಾಭಿಷನನ್ನು ಸೆಳೆಯುತ್ತದೆ. ಅನಿರೀಕ್ಷಿತ ವಿಪರ್ಯಾಸದಿಂದ ಚಕಿತನಾದ ರಾಜ ಆ ಪ್ರಭೆಯ ಕುರಿತು ಯೋಚಿಸುತ್ತಿರುವಾಗಲೇ ಅವನಿಗರಿವಿಲ್ಲದಂತೆ, ಅದು ಅವನನ್ನು ಊರ್ಧ್ವಾಭಿಮುಖವಾಗಿ ಸೆಳೆಯುತ್ತದೆ. ಸಾಗಿ ಬಂದು ಸುರಲೋಕವನ್ನು ಕಂಡ ಮಹಾಭಿಷ ಅಲ್ಲಿನ ಸೊಗಸನ್ನು ವರ್ಣಿಸುತ್ತಾ, ದೇವೇಂದ್ರ ಸಭೆಯ ಕಡೆ ಸಾಗುತ್ತಾನೆ. ದೇವೇಂದ್ರ ಓಲಗಸ್ಥನಾಗಿ ಮಹಾಭಿಷನ ಆಗಮನವನ್ನು ಆದರದಿಂದ ಸ್ವಾಗತಿಸುತ್ತಾನೆ. ಸತ್ಯಲೋಕದಲ್ಲಿ ಬ್ರಹ್ಮ ಲೋಕಕಲ್ಯಾಣಾರ್ಥವಾಗಿ ಮಾಡುವ ಮೇರು (ಮಹಾ) ಪೂಜೆಯಲ್ಲಿ ಭಾಗಿಯಾಗಲು ದೇವೇಂದ್ರ ಅರಸನಿಗೆ ಕೇಳಿಕೊಳ್ಳುತ್ತಾನೆ. ಅದರಂತೆ ಸುರರೊಡಗೂಡಿ ಆತನೂ ತೆರಳುತ್ತಾನೆ. ಅತ್ತಕಡೆಯಲ್ಲಿ ಬ್ರಹ್ಮ ಮಹತ್ತರ ಪೂಜೆಗೆ ಸಿದ್ಧನಾಗಿ ದೇವತೆಗಳ ಬರನಿರೀಕ್ಷೆಯಲ್ಲಿರುತ್ತಾನೆ. ಬಂದವರನ್ನು ಸ್ವಾಗತಿಸಿ ಗಂಗೆಯಿಂದ ನಾಟ್ಯ ಪ್ರಾರಂಭಿಸಲು ತಿಳಿಸುತ್ತಾನೆ. ಗಂಗೆಯ ನಾಟ್ಯ ಆರಂಭವಾಗುತ್ತದೆ. ನಾಟ್ಯಾಂತ್ಯದ ವೇಳೆಗೆ ಗಂಗೆಯ ಸೆರಗು, ಬೀಸಿದ ರಭಸಮಾರುತಕ್ಕೆ ಸಿಲುಕಿ ಜಾರಿದಾಗ, ಕುಳಿತ ಮಹಾಭಿಷನು ಅವಳನ್ನೇ ನಿಂತು ಕಾಮಭಾವದಿಂದ ನೋಡುತ್ತಾನೆ. ದೇವತೆಗಳೆಲ್ಲರೂ ಅದನ್ನು ಕಾಣಲಾರದೇ ತಲೆತಗ್ಗಿಸುತ್ತಾರೆ. ಆ ಕ್ಷಣಕ್ಕೆ ಗಂಗೆಯಲ್ಲಿಯೂ ಕಾಮಭಾವಸಂಚಾರವಾಗುತ್ತದೆ. ಇದನ್ನೆಲ್ಲವನ್ನು ಎತ್ತರದ ಪೀಠದಲ್ಲಿ ಕುಳಿತ ಬ್ರಹ್ಮ ಕಂಡು ಕಿಡಿಕಾರಿ, ಅವರಿಬ್ಬರಿಗೂ, ಮಹಾ ಸಭೆಯಲ್ಲಿ ಅವಿವೇಕಿಗಳಂತೆ ವರ್ತಿಸಿದ್ದಕ್ಕೆ ನೀವೀರ್ವರೂ ಕಷ್ಟನಷ್ಟಗಳ ಆಗರವಾದ ಭೂಲೋಕ ಸೇರಿ ಬದುಕಿ ಎಂದು ಶಾಪ ನೀಡುತ್ತಾನೆ. ಮಹಾಭಿಷನಿಗೆ, ನೀನು ಸೂರ್ಯವಂಶಜನಾಗಿದ್ದವನು ಇನ್ನು ಚಂದ್ರವಂಶದ ಪ್ರತೀಪ ರಾಜನ ಮಗನಾಗಿ ಹುಟ್ಟು ಎನ್ನುತ್ತಾ ಇಲ್ಲಿ ಸಂಚರಿಸಿದ ಕಾಮವನ್ನು ಮುಂದೆ ಭೂಲೋಕದಲ್ಲಿ ಸತಿಪತಿಗಳಾಗಿ ಲೋಕ ಒಪ್ಪುವ ಸಂಬಂಧದ ಮೂಲಕ ಅನುಭವಿಸಿ, ಅವಳ ಕಾರ್ಯವನ್ನು ನೀನು ವಿರೋಧಿಸಿದಾಗ ನಿನ್ನ ಕಾಮಬಂಧಕ್ಕೆ ಮೋಕ್ಷ ಸಿಗುತ್ತದೆ ಎನ್ನುತ್ತಾನೆ. ಗಂಗೆಗೆ, ನಿನಗೆ ಮುಂದೆ ಮಹಾನ್ ಜ್ಞಾನಿಯೂ, ವಿವೇಕಿಯೂ ಆದ ಮಗನೊಬ್ಬ ಜನಿಸುತ್ತಾನೆ, ಅವನಿಂದ ಕೀರ್ತಿ ವಿಸ್ತಾರವಾಗುತ್ತದೆ, ಮಗನನ್ನು ಪಡೆಯುವ, ಅವನಿಗೆ ವಿದ್ಯೆ ಕಲಿಸುವ, ಭಾಗ್ಯ ನಿನಗೆ. ನಿನ್ನ ಪತಿ ನಿನ್ನ ಕಾರ್ಯವನ್ನು ತಡೆದಲ್ಲಿಗೆ ನಿನಗೆ ಮೋಕ್ಷ. ಪುನಃ ಇಲ್ಲಿಗೆ ಬಂದು ಸೇರುತ್ತೀಯ ಎಂದು ತಿಳಿಸುತ್ತಾನೆ. (ಇಲ್ಲಿಯೂ ಗಂಗೆಗಾಗಲಿ, ಮಹಾಭಿಷನಿಗಾಗಲಿ ಮುಂದೆ ನಿಮಗೆ ಭೀಷ್ಮನೆಂಬ ಮಗ ಜನಿಸುತ್ತಾನೆಂದು ತಿಳಿಸಲೇಬಾರದು.)

(ವೈವಸ್ವತಮನು, ಇಕ್ಷ್ವಾಕು ಮೊದಲಾದವರಿಂದ ಸಾಗಿ ಬಂದ ಪರಂಪರಾನುಗತ ಪೀಠವನ್ನೇ ಇಂದು ತಾನು ಏರಿಕೊಂಡಿದ್ದೇನೆ ಎಂದು ಪರಂಪರೆಯ ಸಂಗತಿ, ಸೂರ್ಯವಂಶದ ಘನತೆಯ ಕುರಿತು ಮಹಾಭಿಷನ ಪೀಠಿಕೆಯಲ್ಲಿ ಬಳಸಿಕೊಳ್ಳಬಹುದು)

**ಕವಿ ಪರಿಚಯ:**

ಶಿವಕುಮಾರ ಬಿ.ಎ. ಅಳಗೋಡು ಇವರು ಮೂಲತಃ ಶಿವಮೊಗ್ಗ ಜಿಲ್ಲೆಯ, ಹೊಸನಗರ ತಾಲ್ಲೂಕಿನ, ನಿಟ್ಟೂರು ಸಮೀಪದ ಅಳಗೋಡು ನಿವಾಸಿ. ಪ್ರಾಥಮಿಕ ಹಂತದಿಂದ ದ್ವಿತೀಯ ಪಿ.ಯು.ಸಿವರೆಗಿನ ಶಿಕ್ಷಣವನ್ನು ನಿಟ್ಟೂರಿನಲ್ಲಿಯೇ ಪೂರ್ಣಗೊಳಿಸಿ ಪದವಿ ವಿದ್ಯಾಭ್ಯಾಸಕ್ಕೆಂದು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿಗೆ ಸೇರಿ ಅಲ್ಲಿ ಬಿ.ಎ. ಮುಗಿಸಿದರು. ಬಳಿಕ ಕನ್ನಡ ಎಂ.ಎ. ವ್ಯಾಸಂಗಕ್ಕೆಂದು ತೆಂಕನಿಡಿಯೂರು ಸರ್ಕಾರಿ ಪ್ರಥಮದರ್ಜೆ ಕಾಲೇಜು ಸೇರಿ, ೨೦೧೭ರ ಮಂಗಳೂರು ವಿಶ್ವವಿದ್ಯಾಲಯದ ಅಂತಿಮ ಪರೀಕ್ಷೆಯಲ್ಲಿ ದ್ವಿತೀಯ ರಾಂಕಿನೊಂದಿಗೆ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿದ ಇವರು ಪ್ರಸ್ತುತ ಉಡುಪಿ ಪೂರ್ಣಪ್ರಜ್ಞ ಕಾಲೇಜಿನ ಪದವಿ ವಿಭಾಗದಲ್ಲಿ ಕನ್ನಡ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಎಳವೆಯಿಂದಲೇ ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದ ಇವರು ಪಿ.ಯು.ಸಿಯಲ್ಲಿ ವಾಣಿಜ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದರೂ ಆ ಬಳಿಕ ಪದವಿ, ಸ್ನಾತಕೋತ್ತರ ಪದವಿ ಪಡೆದಿದ್ದು ಕಲಾವಿಭಾಗದಲ್ಲಿ.

ಯಕ್ಷಗಾನ ಕಲಾವಿದರಾಗಿ, ತಾಳಮದ್ದಳೆ ಅರ್ಥಧಾರಿಗಳಾಗಿ ಪ್ರಸಂಗ ಕವಿಯಾಗಿ ಗುರುತಿಸಿಕೊಂಡಿರುವ ಇವರು ಈವರೆಗೆ ಆರು ವಿಭಿನ್ನ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಸ್ನೇಹಲೋಕ'(ಸಣ್ಣಕಥೆ), 'ಮಹೀಂದ್ರ ಮಹಾಭಿಷ'(ಪೌರಾಣಿಕ ಯಕ್ಷಗಾನ ಪ್ರಸಂಗ), 'ಮುನ್ನುಡಿ'(ಲಲಿತ ಪ್ರಬಂಧ), 'ಲೌಕಿಕದ ಬೆಳಗು' (ಪಂಪಭಾರತದ ವಿಮರ್ಶೆ), 'ಪದ್ಮಶ್ರೀ ಚಿಟ್ಟಾಣಿಯವರ ಕೊನೆಯ ದಿನಗಳು' ಹಾಗೂ 'ದೇವಸೇನಾ ಪರಿಣಯ' (ರಾಜ್ಯಮಟ್ಟದ ಪ್ರಸಂಗ ರಚನಾ ಸ್ಪರ್ಧೆಯಲ್ಲಿ ಪ್ರಥಮ ಪ್ರಶಸ್ತಿ ಪುರಸ್ಕೃತ) ಇಷ್ಟೇ ಅಲ್ಲದೇ ಮಂಗಳೂರು ಆಕಾಶವಾಣಿಯಲ್ಲಿ ಇವರ ಕೆಲವು ಸಣ್ಣಕಥೆಗಳೂ, ಪತ್ರಿಕೆಗಳಲ್ಲಿ ಕೆಲವು ಲೇಖನಗಳೂ ಪ್ರಕಟಗೊಂಡಿವೆ. ಇವರ ಸಾಹಿತ್ಯ ಕೈಂಕರ್ಯವನ್ನು ಅವಲೋಕಿಸಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ೨೦೧೭ನೇ ಸಾಲಿನ ರಾಜ್ಯಮಟ್ಟದ 'ಜ್ಯೋತಿ ಪುರಸ್ಕಾರ'ವನ್ನು ನೀಡಿ ಗೌರವಿಸಿದೆ. ಹಾಗೂ ಬೆಂಗಳೂರಿನ ಹವ್ಯಕ ಸಭಾ, 'ಯುವ ಪುರಸ್ಕಾರ'ದಿಂದ ಸಂಮಾನಿಸಿದೆ.

ಇವರು ಬರೆದ ಪ್ರಸಂಗಗಳು: ಮಹೀಂದ್ರ ಮಹಾಭಿಷ, ದೇವಸೇನಾ ಪರಿಣಯ

**ಟಿಪ್ಪಣಿ:**

ಶ್ರೀಮನ್ಮಹಾಭಾರತದ ಆದಿಪರ್ವದಲ್ಲಿ ಬರುವ ಅತೀ ಸಣ್ಣ ಘಟನೆಯಿದು. ಕೇವಲ ಮೂರ್ನಾಲ್ಕು ಸಾಲಿನಲ್ಲಿ ಮುಗಿದುಹೋಗುವ ಉಲ್ಲೇಖ ಹೊಂದಿದೆಯಷ್ಟೆ. ಈ ಕೃತಿಯಲ್ಲಿ ಮೂಲಕ್ಕೆ ಒಂದಿಷ್ಟೂ ಲೋಪವೆಸಗದೇ ಯಥಾವತ್ತಾಗಿ ಬಳಸಿ, ರಂಗಕ್ಕೆ ಬೇಕಾದಂತೆ ಕೆಲವು ಸಂಗತಿ, ಪಾತ್ರವನ್ನು ಹೊಸತಾಗಿ ಸೃಷ್ಟಿಸಿ, ವಿಸ್ತಾರಗೊಳಿಸಲಾಗಿದೆ. 'ಪುರಾಣನಾಮ ಚೂಡಾಮಣಿ'- ಪು.459, ಅ.ರಾ. ಮಿತ್ರರ 'ಮಹಾಭಾರತ ಪಾತ್ರ ಸಂಗತಿಗಳು'- ಪು.22,23,27 (ಇಲ್ಲಿಯೂ ಮೂಲದಷ್ಟೇ ಮಾಹಿತಿ) ಸೂರ್ಯವಂಶದ ವಂಶಾವಳಿಯಲ್ಲೂ ಈತನ ಉಲ್ಲೇಖವಿಲ್ಲ. ಆದರೆ ಸೂರ್ಯವಂಶದ ಪಟ್ಟಿಯಲ್ಲಿ ಈತ ಬಹಳ ಪ್ರಾಚೀನಂತೂ ಸತ್ಯ, ಘಟನೆಗಳ ಆಧಾರದಿಂದ.

ಚಿಟ್ಟಾಣಿಯವರ ತಂಡದಿಂದ ಪ್ರದರ್ಶನ ಕಂಡಿದೆ

# ಪ್ರಸಂಗ ಸಾಹಿತ್ಯ

**ನಾಂದಿ**

**ವಾರ್ಧಕ**

ಕರಿಮುಖದ ಗಣಪಂಗೆ ಶರಣೆಂಬೆನನವರತ |
ವರವೀರಮಾರುತಿಗೆ ಶಿರಬಾಗಿ ವಂದಿಸುತ |
ಹರಿಚರಣಕಭಿನಮಿಸಿ ಹರಪಾದಪಂಕಜಕೆ ಮಣಿವೆ ನಾನುರು ಭಕ್ತಿಯಿಂ ||
ವರವಿರಿಂಚಿಯ ನೆನೆದು ಮತ್ತಾದಿಮಾಯೆಯಂ |
ನಿರತಸಂಪ್ರೀತಿಗೊಳಿಸುತ್ತ ಮುಕ್ಕೋಟಿ ಸುರ |
ಪರಿವಾರಕೆನ್ನ ನಮನವ ಸಲಿಸುತೀಜಗದಿ ಮತಿಗೆ ಮಂಗಲ ಬೇಡುವೆಂ ||1||

**ಶರಷಟ್ಪದಿ || ಆರ್ಯಸವಾಯ್ - ಏಕ**

ಶಾರದೆ ನೀ ದಯೆ | ದೋರದೆ ಕೃತಿವಧು |
ಧಾರಿಣಿಯೊಳು ಪರಿಶೋಭಿಸದು ||
ಚಾರುವಿಲಾಸದೊ | ಳೀರೆನ್ನಯ ಮತಿ |
ವಾರಿಜಸುತ ವಿಧಿಯೊಸಗೆ ಸತಿ ||2||

**ಕುಸುಮ ಷಟ್ಪದಿ || ನಾಟಿ - ಝಂಪೆ**

ಆದಿಕವಿಗಳ ನೆನೆದು |
ಮೇದಿನಿಯೊಳೆಸೆವ ವರ |
ಸಾಧಕರ ಹಿರಿತನಕೆ ತಲೆವಾಗುತ ||
ಸಾದರದಿ ಭಾರತದೊ |
ಳಾದಿಪರ್ವದೊಳಿರ್ಪ |
ಆದಿತ್ಯವಂಶಜನ ಕಥೆಯೊರೆವೆನು ||3||

**ವಾರ್ಧಕ**

ಗುರುಕುಲೋತ್ತಮರೆನಿಸಿ ಶಿಷ್ಯವೃಂದವ ಪೊರೆದು |
ನಿರತವೆನ್ನಯ ಬಾಳಸಾಗರದ ಮಾಣಿಕ್ಯ |
ಹಿರಿಮೆಯನು ಲೋಕಮುಖದಲಿ ತೋರುತವಗುಣವನರಿದ ಪೂಜ್ಯರನು ನೆನೆವೆ ||
ವರಯಕ್ಷಗಾನದೊಳು ವರ್ಣಮಾಲೆಯ ಪೇಳ್ದ |
ಧರೆಮನೆಯ ಗುರುವಿನಂಘ್ರಿಗೆ ಮಣಿದು ಕೃತಿದೋಷ |
ಪರಿಹರಿಸಿ ಪೋಷಿಸಿದ ಕಿನ್ನಿಗೋಳಿಯ ಸಿರಿಧರರು ವಿಷ್ಣುಭಟ್ರ ನೆನೆವೆ ||4||

**ಸೌರಾಷ್ಟ್ರ - ತ್ರಿವುಡೆ**

ತರಣಿವಂಶಜ ವರಮಹಾಭಿಷ |
ನರಸವೃಂದದೊಳಧಿಕನೆನಿಸುತ ||
ವಿರಚಿಸಿದ ತಾನೋಲಗವ ಸಡ | ಗರದೊಳಂದು ||5||

ಆಲಿಸುವ ಮನವಾದುದೆನಗೆ ವಿ |
ಶಾಲ ವಸುಧೆಯು ಧರ್ಮಕರ್ಮದಿ ||
ಮೇಲೆನಿಸಿ ಸುಖ ತೃಪ್ತಿ ನೆಲೆಸಿತೆ | ಪೇಳಮಾತ್ಯ ||6||

**ಕೇದಾರಗೌಳ - ಅಷ್ಟ**

ಕೇಳುರ್ವೀಪಾಲಕ ಸಜ್ಜನ ಪೋಷಕ |
ಪೇಳುವ ನುಡಿ ದಿಟವು ||
ಕಾಲಕಾಲದೊಳಿಳೆ ತಂಪೇರಿ ಫಲವಿತ್ತು |
ಬಾಳಿಗಾಸರೆಯಾಗುತ ||7||

ಮೊದಲವರ್ಣದ ವಿಪ್ರರಾಚಾರ ತೊರೆಯದೆ |
ಉದರ ಪೋಷಕರಾಗದೆ ||
ಒದಗುತ ಯಜ್ಞ ಯಾಗವಗೈಯ್ಯೆ ಸುರರೆಲ್ಲ |
ಮುದಗೊಂಡು ಹರಸುತ್ತಿರೆ ||8||

ಕಾಯುತಲಿಲ್ಲ ಕೊಲ್ಲುತಲಲ್ಲ ವೀರರು |
ಕಾಯದಾಸೆಯ ತೊರೆದು ||
ಶ್ರೀಯುತರೆಲ್ಲ ಸೌಖ್ಯದಿ ಬಾಳುತಿಹರಯ್ಯ |
ಮಾಯೆಯ ಮಾತಲ್ಲವು ||9||

ಮೂರು ನಾಲ್ಕನೆ ವರ್ಣ ವೈಶ್ಯರು ಶೂದ್ರರು |
ಮೇರೆ ಮೀರಿಲ್ಲರಿಲ್ಲ ||
ಚಾರುಸಂಪದ ವರಪರಿವಾರ ನಿನ್ನಯ |
ಧಾರಿಣಿಯೊಳು ಸುಸ್ಥಿರ ||10||

ಅರರೆ ಮಂತ್ರೀಶನೆ ಧನ್ಯವೆನ್ನಯ ಬಾಳು |
ಹಿರಿದಪ್ಪ ಜನಪದದಿಂ ||
ಇರುತಿಹ ವೇಳೆಯೊಳೀಗೆನ್ನ ಮಾನಸ |
ಧರಿಸಿತಾಸೆಯನೆನಲು ||11||

ದೊರೆರಾಯ ಪೇಳ್ವರೆ ನಿನ್ನ ಮಾನಸದಾಸೆ |
ಪರಿಹರಿಸುವೆನಾದೊಡೆ ||
ಅರಸರೆಂಬುವ ದೇವತೋರಿದ ಮಾರ್ಗದಿ |
ನಿರತ ಪೋಪುದೆ ಧರ್ಮವು ||12||

**ಬೇಗಡೆ - ಏಕ**
ಆಲಿಸೈ ಮಂತ್ರೀಶ ಹದನವನು | ಪೇಳುವೆನು ನಾ ಮನ |
ದಾಳದೊಳು ಹುದುಗಿರ್ಪ ವಾಂಛೆಯನು ||
ಭೂಲಲನೆ ಸಿರಿಯಾಂತುದಾಯಿತು |
ಮೇಲಣಾಸೆಯು ನಾಕ ಸೇರಲು |
ಬಾಲಭಾಷಿತವೆಂದು ಬಗೆಯದೆ |
ಶೀಲ ಪೇಳಿದಕೊಂದುಪಾಯವ ||13||

ಅರುಹುವೆನು ಕೇಳ್ ಸಾರ್ವಭೌಮಕನೆ | ಬರ್ದಿಲರ ಲೋಕಕೆ |
ಚರಿಸುವಾಸೆಗೆ ಯಾಗ ಮಾರ್ಗವನೆ ||
ತುರಗ ಮೇಧವು ಸಾಸಿರವು ಮನ |
ವಿರಿಸಿ ವಿರಚಿಸು ರಾಜಸೂಯವ |
ನುರುತೆರದಿ ನೂರ್ಬಾರಿ ಬಲಿಯೈ |
ಸುರಪುರಕೆ ನೀಂ ಪುಣ್ಯದೇಣಿಯ ||14||

**ಕೇದಾರಗೌಳ - ಝಂಪೆ**
ಮಂತ್ರಿ ಪೇಳಯ್ಯ ನೀನು | ಕಾಯ ಸುರ |
ತಿಂತಿಣಿಯ ಸೇರ್ವುದೇನು ||
ಚಿಂತೆಗಳ ಹುಟ್ಟಡಗಿಸು | ಮಾನಸದಿ |
ಸಂತಸದ ಕಡಲುಕ್ಕಿಸು ||15||

ದೊರೆರಾಯ ಪುಸಿಯಲ್ಲವು | ದಿವ್ಯತ್ವ |
ದೊರಕಿದಾಕ್ಷಣ ಗೇಹವು ||
ಪರಿಕಿಸೀಸತ್ರ ಗೈದು | ತವ ಮನದಿ |
ಪರಿಶುದ್ಧ ಭಾವದಳೆದು ||16||

ಪೋಗಿ ಬಾ ದೊರೆಯೆ ನೀನು | ಯಾಗವನು |
ಸಾಗಿಸಲು ಗುರುವ ಕಾಣು ||
ಮೇಗೇರಿ ಪುಣ್ಯಕಾಯ | ನಾಕದಾ |
ಯೋಗವನು ಕಾಂಬುದಯ್ಯ ||17||

**ಭಾಮಿನಿ**

ಮನದ ವಾಂಛೆಯ ಯಾಗ ಮುಖದಲಿ |
ನೆನೆದ ತೆರದಿಂ ನೀಗಿಕೊಳುವರೆ |
ಸನುಮತದ ಪಥವಿಲ್ಲವಿದರಿಂದಧಿಕವೆಂದೆನುತ ||
ಘನಸಚಿವನಿಂತರುಹಿದಂದದೊ |
ಳನುನಯದಿ ನಾ ಗೈವೆ ಸತ್ರುವ |
ನೆನುತ ಪೊಡವಿಪನಡಿಯನಿರಿಸಿದ ಯಾಗಶಾಲೆಯೆಡೆ ||18||

**ವಾರ್ಧಕ**

ವಿರಚಿಸುತ ಯಜ್ಞವೇದಿಕೆಯ ಕರೆಸಿದ ಮಂತ್ರ |
ವರರಾದ ಹೋತೃವಧ್ವರ್ಯರುದ್ಗಾತೃಗಳ |
ಪಿರಿಯ ಬ್ರಹ್ಮಸ್ಥಾನಕನುಗೊಳಿಸಿ ಋಷಿಗಳಂ ಕುಂಡತ್ರಯಗಳ ರಚಿಸಿ ||
ಪರಿಪರಿಯ ವೇದಘೋಷಂ ಮೊಳಗೆ ಋತ್ವಿಜರ್ |
ವರಗಾರ್ಹಪತ್ಯಾದಿ ವಹ್ನಿಯೊಳ್ ಹವಿಗಳಂ |
ಕರೆದರ್ಪಿಸಿದರು ಸ್ವಾಹಾಕಾರ ಮಂತ್ರದಿಂ ನಡೆಸಿದರ್ ಬಹು ಯಾಗವ ||19||

**ಭಾಮಿನಿ**

ಹೋಮಧೂಮವು ಮುಗಿಲ ಮುತ್ತುತ |
ಲಾಮಹಾ ಯಾಗಗಳು ಸಾಗಲು |
ಸಾಮದಿಂದುರುಳಿದುದು ಕೆಲವತ್ಸರಗಳರಿಯದೆಯೆ ||
ಭೂಮಿಪನ ಪುರ ಧರಣಿಯಮರ |
ಸ್ತೋಮದಿಂ ತುಂಬುತ್ತಲವಿರತ |
ಕಾಮಿಸಿದ ಧನ ಕನಕ ಪಡೆಯಲ್ ಸಾಲೊಳೈತರುತ ||20||

**ಸುರುಟಿ - ಏಕ**

ಯಾಗವೆನಲು ಕೇಳಿ | ಪಾರ್ವನು |
ಬೇಗಿದ ಮುದತಾಳಿ ||
ಯೋಗವು ಬಡತನ | ಬೇಗೆಯ ನೀಗ್ವುದ |
ತಾ ಗುಣಿಸುತಲವ | ಸಾಗಿದ ನೃಪನೆಡೆ ||21||

ಚರಿಸಿದನರಮನೆಯ | ಪೊಗಳುತ |
ಲರಸನ ಕೀರುತಿಯ ||
ವರಭವನಂಗಳ | ನಿರುಕಿಸಿ ಭೂಸುರ |
ಪುರದೊಲ್ಲಭನ | ನ್ನರಸುತ ಪೊರಟನು ||22||

**ಕಾಂಭೋದಿ - ಝಂಪೆ**
ದೂರದಿಂದೈತರುವ ವಿಪ್ರರನು ಕಾಣುತ್ತ |
ಲೇರಿದಾಸನವಿಳಿದು ನೃಪತಿ ||
ಚಾರುತೋಷದಿ ಪೀಠವಿತ್ತುಪಚರಿಸುತ ಚರ |
ಣಾರವಿಂದಕೆ ಮಣಿದನಾಗ ||23||

ಅರಸ ಹರುಷವನಾಂತೆ ವರಸತ್ರಸರಣಿಗಳ |
ವಿರಚಿಸಿದೆ ಚಿರಕಾಲ ಬಾಳು ||
ತುರಗ ಮೇಧವು ಮತ್ತೆ ರಾಜಸೂಯಗಳಿಂದ |
ಸುರ ನರರ ಹೃನ್ಮನವ ಗೆಲ್ಲು ||24||

**ಕೇದಾರಗೌಳ - ಝಂಪೆ**
ಧನ್ಯನಾದೆನು ವಂದ್ಯನೆ | ಮನದಿಚ್ಛೆ |
ಯನ್ನರಿತ ಭೂದೇವನೆ ||
ಉನ್ನತದ ನುಡಿಯೊರೆದಿರಿ | ಸಗ್ಗಸಿರಿ |
ಯನ್ನು ಕಾಣಲು ಹರಸಿರಿ ||25||

ಮನದುಂಬಿ ನಿನ್ನಾಸೆಯ | ಕೈಗೂಡ |
ಲನುಮಾಡಿ ಕೊಡುವೆನಯ್ಯ ||
ತನುಸಹಿತ ಸುರಪುರವನು | ಸೇರು ನೀ |
ನನಿಮಿಷನಿಕಾಯವನ್ನು ||26||

ಹರಸಿದಾ ವೃದ್ಧನಡಿಗೆ | ಧರಣಿಪತಿ |
ಶಿರಬಾಗಿ ನಮಿಸಿದನುಘೇ ||
ಹೊರುವಷ್ಟು ಧನತುಂಬಿಸಿ | ಬೀಳ್ಕೊಟ್ಟ |
ಪರಮಗಾಂಭೀರ್ಯವೆರಸಿ ||27||

**ಕಂದ**
ಡಿಂಬವಿದು ನಾಕಮಂ ಪೊಗ |
ಲಂಬುಜನಾಭಂ ಕರುಣೆಯ ತೋರ್ವುದವಶ್ಯಂ ||
ನಂಬಲು ಬಿಡನವನೆಂದಿಗು |
ಸಂಭ್ರಮದಿಂ ದೇಗುಲಮಂ ಸೇರ್ವೆನೆನುತ್ತಂ ||28||

**ಸೌರಾಷ್ಟ್ರ - ತ್ರಿವುಡೆ**
ಇಳಿದಳಂಬರದಿಂದ ಭೂಮಿಗೆ |
ಲಲನೆ ಖೇಚರಕನ್ಯೆ ಕುಮುದಳು ||
ನಲವಿನಿಂ ಜಲಕೇಳಿಗೆನುತಲಿ | ಪುಳಕಗೊಳುತ ||29||

ನಿತ್ಯ ನೂತನೆ ಪೃಥ್ವಿ ಪುಳಕಿಸೆ |
ಚಿತ್ತಕಾನಂದವನು ನಲಿದಳು ||
ಎತ್ತನೋಡಿದರತ್ತ ಮನಸೆಳೆ | ಯುತ್ತಲಿರಲು ||30||
ಕುಸುಮತೋರಣ ವೃಕ್ಷಮಂಟಪ |
ಪೊಸತೆನಿಪ ಸೌಂದರ್ಯದಾಗರ ||
ಎಸೆವ ತೋಯದೊಳಿಳಿವೆನೆನುತಲಿ | ಬಿಸಜನೇತ್ರೆ ||31||

**ಜಂಜೂಟಿ - ರೂಪಕ**
ಕಂಡಳಾಗ ನವವಸಂತ ಋತುವಿಲಾಸವ |
ಪುಂಡರೀಕ ಪೂವ ಕೊಳದಿ ಜೋಡಿ ಹಂಸವ ||ಪ||
ಸುಮಪರಾಗ ಸವಿಗೆ ಭೃಂಗಮಾಲೆ ನಲಿಯುತ |
ದ್ರುಮನಿವಾಸಿ ಶುಕಗಳೆರಡು ಪ್ರಣಯವಾಡುತ ||
ವರಮಯೂರ ಗರಿಯ ಕೆದರಿ ನಾಟ್ಯವಾಡಲು |
ಹರಿಣಯುಗವು ಜಿಗಿದು ಜಿಗಿದು ಹುಲ್ಲನರಸಲು ||
ಮಲ್ಲಿಲತೆಗೆ ಮೋಹವಾಗಿ ಮರವನಪ್ಪಿದೆ |
ಎಲ್ಲಿಗಾಣೆ ವನದ ಸಿರಿಯು ಮುಗಿಲ ಮುತ್ತಿದೆ ||32||

**ವಚನ**
ಇಂತಾ ಗಂಧರ್ವಕನ್ನಿಕೆ ತಾನೋರ್ವಳೇ ಜಲಕೇಳಿಯಾಡಿ ವನವಿಹಾರಂಗೈದು ದಾಂಗುಡಿಯ ಮುಡಿಯೊಳಿರ್ದಾ ಸುಮಮಂ ಕೊಯ್ಯುತಲ್ಮುಂದೆ ಸಾಗಲ್

**{ಪದ್ಯಕ್ಕೇ ದುರ್ಜಯನ ಪ್ರವೇಶ}**

**ಸೌರಾಷ್ಟ್ರ - ತ್ರಿವುಡೆ**
ಒರೆಯ ಖಡ್ಗವನೆಳೆದು ತೋರುತ |
ದುರುಳ ದುರ್ಜಯನಟ್ಟಹಾಸದಿ ||
ವರಮಹೀಂದ್ರನ ಮಹಿಯೊಳಿರ್ದನು | ಕೆರಳುತಾಗ ||33||

ಪೊಡವಿಯೊಡೆಯನ ಬಡಿವ ಮನವಿರ |
ಲಡಿಗಡಿಗೆ ವಿಘ್ನಗಳು ಜಯಸಿರಿ ||
ಪಡೆಯೆ ಕಾಲವನರಿತು ಕೆಡಹುವೆ | ಬಿಡೆನೆನುತ್ತ ||34||

ರತಿಯ ಮೇಳದೊಳಡಗಿ ಮನ್ಮಥ |
ಸತತವೆನ್ನೆಡೆ ಶರಗಳೆಸೆವನು ||
ಹತಿಯ ತಾಳೆ ಮನೋಹರಿಯ ಕೂ | ಡುತಲಿ ತಣಿವೆ ||35||

**ಭಾಮಿನಿ**
ಚಂಚಲಾಕ್ಷಿಯು ವನದೊಳೋರ್ವಳೆ |
ಸಂಚರಿಸುವಾ ಪರಿಯ ಕಾಣಲು |
ಪಂಚಬಾಣನ ಶರವು ನಾಂಟಿತು ಖಳನ ಮಾನಸಕೆ ||
ಕೊಂಚಕೊಂಚನೆ ತನುವು ಬಳಲಿ ವಿ |
ರಿಂಚಿ ಸೃಷ್ಟಿಯೊಳಧಿಕಳೆನಿಸಿ ಪ |
ಳಂಚಲೆವ ಸುಮನೋಹರೆಯನೀಕ್ಷಿಸುತಲಿಂತೆಂದ ||36||

**ಸಾರಂಗ - ಅಷ್ಟ**
ಅರರೆ ಯಾರೀ ಬೆಡಗಿ | ಮನಮೋಹನಾಂಗಿ |
ಸುರುಚಿರಾನನೆ ಶುಭಾಂಗಿ ||
ಧರಣಿ ಮೂರರೊಳಿಲ್ಲವೀರೀತಿ ಶೃಂಗಾರಿ |
ಸ್ಮರನ ಕಾಂತೆಯ ರೂಪ ನಾಚುವ ವಯ್ಯಾರಿ ||37||
ನಿಲ್ಲು ನಿಲ್ಲೆಲೆ ಚದುರೆ | ಮೋಹಾಕಾರೆ |
ನಲ್ಲೆ ಮಾನಸವಿಹಾರೆ ||
ಖುಲ್ಲ ಮನ್ಮಥಬಾಧೆ ಸೈರಿಸದಾದೆನು |
ಪಲ್ಲಂಗವೇರಿ ಪೂಬಾಣನಾಟಕೆ ಬಾರೆ ||38||

**ಕೇದಾರಗೌಳ - ಝಂಪೆ**
ಏನನಾಡಿದೆಯೊ ಮೂರ್ಖ | ಮಾನಿನಿಯ |
ನೇನ ತಿಳಿದಿಹೆ ಕಾಮುಕ ||
ಶ್ವಾನಸನ್ನಿಭನೆ ನಿನ್ನ | ಬಿರೆಯೆನಿದ |
ನೀನರಿತು ತೊಲಗು ಮುನ್ನ ||39||

ಮಾರಸುಮಶರಕೆ ನೊಂದು | ಬಂದೆ ಕೇಳ್ |
ನಾರಿ ಸ್ಮರನಾಟಕೆಂದು ||
ಸಾರಸಾಕ್ಷಿಯ ಕೂಡಲು | ನಿಂದಿಹೆನು |
ಬಾರೆ ಶೀಘ್ರದಿ ರಮಿಸಲು ||40 ||

ಕಾಲ್ಗೆರಗಿ ನಮಿಪೆ ದುರುಳ | ನಿರ್ಮಲದ |
ಬಾಳ ಕೆಡಿಸದೆ ಪೋಗೆಲ ||
ಖೂಳರೆಲ್ಲರ ತೆರದಲಿ | ಸಾಯಬೇ |
ಡೇಳು ಬದುಕೀ ಧರೆಯಲಿ ||41||

**ಭಾಮಿನಿ**
ಬಲೆಗೆ ಸಿಲುಕಿದ ಹುಲ್ಲೆಯಂದದಿ |
ಲಲನೆ ನಾಲ್ದೆಸೆ ಪರಿಕಿಸುತ ಕ |
ಣ್ಗಳಲಿ ಜಲಸುಳಿಯಾಂತು ಮಾನವನುಳಿಸಿರೆಂದಳುತ ||
ನಳಿನಮುಖಿಯಾಕ್ರಂದನಕ್ಕವ |
ನಿಲುಕದೆಯೆ ಮೃದು ಧವಳ ಕರಗಳ |
ಸೆಳೆದನತಿ ಕಲ್ಮನದಿ ಮಾರನ ಹತಿಯ ಹಿಂಗಿಸಲು ||42||

**ಭೈರವಿ - ಏಕ**
ವರನಾರಿಯ ಬೊಬ್ಬೆಯನು | ಕೇ |
ಳಿರದೈತಂದಾ ನೃಪನು ||
ಶರ ಚಾಪವ ಧರಿಸುತಲಿ | ತಡೆ |
ದೊರೆದನು ಕಡುಕೋಪದಲಿ ||43||

**ಶಂಕರಾಭರಣ - ಮಟ್ಟೆ || ಭೋಗ ಷಟ್ಪದಿ**
ನಿಲ್ಲು ನಿಲ್ಲು ನಾಡಸಿಂಗ |
ಫುಲ್ಲನಯನೆ ಬಿಟ್ಟು ತೆರಳು ||
ಸಲ್ಲದೆಂದೊಡಿನ್ನು ನಿನ್ನ |
ಕೊಲ್ಲದುಳಿಯೆನು ||44||

ಸಾರೊ ದೂರ ಬಡನೃಪಾಲ |
ಮಾರಿಪೋಯ್ತು ನಿನಗೆ ಬಲವು ||
ನಾರಿತನುವ ಸವಿವೆ ನೋಡು |
ಧೀರತನವಿರೆ ||45||

ಮುಚ್ಚುಬಾಯಿ ದುರುಳ ನಿನ್ನ |
ಹುಚ್ಚುಬಿಡಿಸಿ ಮೆರೆವೆನೆನುತ ||
ಕಿಚ್ಚಿನಿಂದಲೊಂದು ಶರವ |
ನೆಚ್ಚಲಾತಗೆ ||46||

ವರಮಹೀಶನೆಸೆದ ಶರಕೆ |
ದುರುಳನಂತ್ಯ ಧರೆಯೊಳಾಗೆ ||
ದೊರೆಯ ಬಳಿಗೆ ಸಾರ್ದ ಲಲನೆ |
ಯೊರೆದಳೊಂದನು ||47||

**ಆರ್ಯಸವಾಯ್ - ಏಕ**
ಬಿಟ್ಟಸ್ತ್ರದ ತೆರ ಬಂದಬ್ಬರಿಸಿದ |
ದಿಟ್ಟನೆ ನಿನಗೆನ್ನಯ ನಮನ ||
ಬಟ್ಟೆಯೊಳಿರ್ದಾ ಖಳನನು ಜವನೆಡೆ |
ಥಟ್ಟನೆ ಕಳುಹಿದೆ ಪೊರೆದೆನ್ನ ||48||

ಯಾರೆಲೆ ಮೋಹಿನಿ ಪೇಳೂರಾವುದು |
ಸಾರಸಮುಖಿ ಕಾರ್ಯಗಳೇನೆ ||
ಧಾರಿಣಿಪನು ನಾ ಕಾಯ್ವೆನು ನಿನ್ನನು |
ಬಾರದು ಭಯ ನಿನ್ನೆಡೆಗಿನ್ನು ||49||

**ನವರೋಜು - ಏಕ**
ಖೇಚರ ಕನ್ನಿಕೆ ನಾನು | ಕೇಳ್ |
ನೀಚನ ಕೊಂದಿಹೆ ನೀನು ||
ಈ ಚೆಲುವಿನ ವನದೆಡೆಗೈತಂದೆನು |
ಯಾಚಿಸುತಿಹೆ ವರಿಸೆನ್ನನು ಭೂವರ ||50||

ಸುಂದರಿ ಗೋಗರೆಯದಿರು | ಜೊತೆ |
ಹೊಂದದು ನೀ ಪುರ ಸೇರು ||
ಎಂದಿಗು ನಿನ್ನಂದವು ಮರೆಯಾಗದು |
ಕಂದುವುದೀ ತನು ಕಾಂತಿಯ ಕಳೆಯುತ ||51||

**ಮಧುಮಾಧವಿ - ಏಕ**
ಹಿಂದೆ ಪುರೂರವನೂರ್ವಶಿಯನ್ನು |
ಹೊಂದೆ ಚಂದ್ರಾನ್ವಯ ಬೆಳಗಿಹುದಿನ್ನು ||
ಗಂಧರ್ವಕನ್ಯೆ ವಸುಂಧರೆಯಧಿಪ |
ಒಂದಾಗಲೇಂ ಕುಂದು ಬಹುದಯ್ಯ ಭೂಪ ||52||

ಶಾಪದ ಫಲದಿಂದಲಾ ಪುರೂರವನ |
ಓಪಳಾದಪ್ಸರೆ ಕೈಬಿಟ್ಟ ಕಥನ ||
ರೂಪ ಯೌವನವು ಪ್ರತಾಪಗಳೆಲ್ಲ |
ಪೋಪುದು ಸಹಜ ಪೋಗೆನಗಿದು ಹೊಲ್ಲ ||53||

**ಭಾಮಿನಿ (ಅರ್ಧ)**
ಹಲವು ಬಗೆಯಲಿ ಲಲನೆ ಮಹಿಪನ |
ಸೆಳೆವ ಯತ್ನದೊಳಾಗಲಪಜಯ |
ಇಳಿದಪರಿಯಂತೇರಿ ಪೊರಡಲ್ಕರಸ ಪುರ ಸೇರ್ದ ||54||

**ಭಾಮಿನಿ**
ಅರಮನೆಯ ಹೇಮಾಸನದೊಳಿಳೆ |
ಯರಸನಧ್ವರ ಗೈದು ಕುಳ್ಳಿರೆ |
ವಿರಚಿಸಿದ ಕ್ರತುಫಲವು ಸೇರಿದುದಂಬರದ ಗಡಿಯ ||
ಪರಿಕಿಸಲು ಪ್ರಭೆಯಾಗುತೂರ್ಧ್ವದಿ |
ಭರದಿ ಬಂದವನಿಪನ ಸೆಳೆಯ |
ಲ್ಕರಿಯದಂದದಿ ನಭವ ನೋಡುತಲಾಂತು ವಿಸ್ಮಯವ ||55||

**ಕಾಪಿ - ಅಷ್ಟ**
ಏನಿದೇನಿದು ಚೋದ್ಯವರರೆ | ಈ |
ಭಾನುತೇಜದ ಕಾಂತಿಗೆಣೆಯಿಲ್ಲ ಧಿರುರೆ ||ಪ||
ಎಂತು ಬಣ್ಣಿಪೆನಿದನೆಂದು | ಗುಣ |
ವಂತ ಭೂಕಾಂತನಚ್ಚರಿಯಾಂತು ನಿಂದು ||
ಚಿಂತೆಯ ಹರಿವ ಸುಪ್ರಭೆಯೋ | ಮೇ |
ಣೆಂತೆನ್ನ ವಂಚಿಸಲನುವಾದ ಹಗೆಯೋ ||56||

ಅಂಬರದಂಚನು ತೊರೆದು | ಪ್ರಭೆ |
ಕುಂಭಿನಿ ಸೇರಿದುದೇನೆಂಬೆನೊಲಿದು ||
ಹೊಂಬಣ್ಣದಿಂದ  ಶೋಭಿಸುತ | ನೃಪ |
ನೆಂಬುದನರಿಯದೆ ಬಿಡದೆ ಕಾಡುತ್ತ ||57||

**ಸೌರಾಷ್ಟ್ರ - ತ್ರಿವುಡೆ**
ಜನಪನೀಪರಿಯೆಣಿಸುತಿರಲಾ  |
ಕನಕರಂಜಿತ ದಿವ್ಯ ಕಾಂತಿಯು  ||
ತನುಮನಂಗಳ ಸೆಳೆಯಿತೂರ್ಧ್ವಕೆ | ಘನತೆಯಿಂದ  ||58||

ಮಧುರ ಮಂದಾನಿಲವ ಸೇರುತ |
ಲುದಯರವಿ ಕುಲತಿಲಕನೇರಿದ  ||
ಸುದಿನದೋಳ್ ಸುರನಗರಿಗೈದನು  | ಕದನಗಲಿಯು ||59||

**ಭಾಮಿನಿ**
ಅಮರಲೋಕದೊಳೆಸೆವ ಕಾಂತಿಯ |
ನಮಿತ ಹರ್ಷದೊಳೀಕ್ಷಿಸುತಲೇ |
ನಮಮವೆಂಬುದಾಗ್ರದಿಂ ಕೊಂಡಾಡಿದನು ಮನದಿ ||
ಸುಮನಸಾಧಿಪರಿರುವ ನಾಕಕೆ |
ಗಮಿಸಿದಾಶ್ಚರ್ಯವನು ನೆನೆಯುತ |
ವಿಮಲಮಾನಸ ಸೂರೆಯಾಗಲ್ಕೆಂದ ಮೈಮರೆತು  ||60||

**ಜಂಜೂಟಿ - ರೂಪಕ**
ಅಹಹಯೇನಿದೇನು ಸೊಬಗು ಚಿತ್ತರಂಜಕ |
ಮಹಿಯೊಳಿಂಥ ಚೆಲುವ ಕಾಣೆನೆಂಥ ಮೋಹಕ ||
ವಿಹರಿಸಲ್ಕೆ ನಲಿವು ಮನಕೆ ವನದೊಳೀದಿನ |
ಗಹನಕಾಂತಿ ಪೇಳ್ವೆನೇನ ತಂಪು ಹೃನ್ಮನ ||61||

**ಕೇದಾರಗೌಳ - ಝಂಪೆ**
ಅರೆರೆ ಸೌಂದರ್ಯ ನಿಧಿಯು | ಬಣ್ಣಿಸಲು |
ಬರಿದಾಯ್ತು ಕಾವ್ಯ ಸಿರಿಯು ||
ಅರುಹಲಾರದೆ ಬಳಲಿದೆ | ವಿಭವದಾ |
ಹಿರಿಮೆಯನು ಮನ ಧರಿಸಿದೆ ||62||

**ಆರಭಿ - ಆದಿ**
ನೀಲವರ್ಣದಿ ಮೆರೆವ | ನೀರೊಳು ಹಂಸ |
ತೇಲುತಾಡುವ ಚಂದವ ||
ಲೀಲೆಯೊಳ್ನವರತ್ನ ರಾಜಿಪ ಚೋದ್ಯವ |
ಶೀಲ ಜಿಹ್ವೆಯೊಳೆಂತು ಮನದುಂಬಿ ಬಣ್ಣಿಪೆ ||63||

ತರಣಲೋಕವನು ಸೇರಿ | ಸಂತಸದಿಂದ |
ಸಿರಿಯ ಸತ್ವವನು ಹೀರಿ ||
ಸುರಪನುದ್ಯಾನವ ಸುರಸಭೆಯಂದವ |
ಪರಿಕಿಸಲವನೀಶ ತನ್ನಂಘ್ರಿಯಿರಿಸುತ ||64||

**{ದೇವೇಂದ್ರ, ಬಲ ಸಹಿತ ಪದ್ಯಕ್ಕೇ ಪ್ರವೇಶ}**

**ಸೌರಾಷ್ಟ್ರ - ತ್ರಿವುಡೆ**
ಸುರಪುರದಿ ದೇವೇಶ ತನ್ಮಯ |
ಸುರುಚಿರಾಸನವೇರಿ ಮಂಡಿಸಿ ||
ಹರಿಯ ನೆನೆದೋಲಗವನಿತ್ತನು | ಹರುಷದಿಂದ ||65||

ಅರುಹಬೇಹುದು ದೇವನಿವಹವು |
ಕೊರತೆಗಳ ಮನವೊಲಿದು ಸಭೆಯೊಳು ||
ಪರಿಹರಿಪೆ ನೀವೆಂದ ಸಕಲವ | ನರಿತು ಭರದಿ ||66||

ಶ್ರೀಧವನ ಕರುಣಾಬ್ಧಿಯೊಳು ನಾ |
ವೀ ದಿವಿಜಲೋಕದಲಿ ಸುಖಿಗಳು ||
ಭೇದವೆಳ್ಳನಿತಿಲ್ಲ ಕೇಳ್ ನಿ | ನ್ನಾದರದಲಿ ||67||

ಮುಂಬರುವ ದಿನ ದೈತ್ಯಸಾಗರ |
ಹಂಬಲಿಸುತೀನಾಕ ಹೊಕ್ಕರೆ ||
ಪೊಂಬಸಿರ ಹರಿ ಶಿವನ ದಯದಿಂ | ಜಂಭ ಮುರಿವೆ ||68||

**ಭಾಮಿನಿ (ಅರ್ಧ)**
ತರಣಿಕುಲಸುಕುಮಾರ ಸುಮನಸ |
ಪುರದ ಹಿರಿಮೆಗೆ ಸೋತು ಮುಂಬರು |
ತಿರುವ ಪರಿಯನು ಕಾಣುತಲಿ ಮೆಯ್ಗಣ್ಣ ನಸುನಗುತ ||69||

**ಸುರುಟಿ - ಏಕ**
ಧರಣಿಪನನು ಕಂಡು | ಶತಕ್ರತು |
ಹರುಷದೊಳಿದಿರ್ಗೊಂಡು ||
ಪರಿಪರಿಯಿಂದುಪ | ಚರಿಸುತಲಾತಗೆ |
ಸರಿಯೊಪ್ಪುವ ವಿ | ಷ್ಟರವನೆ ತೋರುತ ||70||

ಸುರಪತಿ ನೀ ದಯದಿ | ಸಖ್ಯವ |
ಕರುಣಿಸೆ ನಗುಮೊಗದಿ ||
ಉರುತರ ಸಂತಸ | ಧರಿಸಿತು ಮನ್ನೃಪ |
ಪರಮಾದರದಿಂ | ಕರೆತಂದಂದಕೆ ||71||

**{ನೇರವಾಗಿ ಪದ್ಯಕ್ಕೇ ಬ್ರಹ್ಮನ ಪ್ರವೇಶ}**

**ತುಜಾವಂತು - ಝಂಪೆ**
ಸತ್ಯಲೋಕದಿ ಕಮಲಸಂಭವನು ಸಂತಸದಿ |
ಪತ್ನಿ ಶಾರದೆಯೊಡನೆ ಸುಮಪೀಠವೇರಿ ||
ನಿತ್ಯನೂತನ ಸಭೆಯೊಳೆತ್ತರದಿ ರಾಜಿಸುತ |
ಲತ್ರಿ ಗೌತಮ ದಕ್ಷ ಭೃಗುಸೇವೆ ಪಡೆದ ||72||

ಹಸಿವು ತೃಷೆ ಮುಪ್ಪಿಲ್ಲದವಿನಾಶಿ ಲೋಕದಲಿ |
ವಸು ರುದ್ರ ನಿಯತಿ ಯತಿ ಕಾಲಚಕ್ರಗಳು ||
ಕುಶಲದಿಂದಾದಿತ್ಯನಿವಹ ಮಿಗೆ ಭಜಿಸುವರು |
ಬಿಸಜಪೀಠನ ಸಭೆಯೊಳೊಂದಾಗಿ ಸೇರಿ ||73||

ಈರೇಳುಲೋಕದಲಿ ಕ್ಷೇಮವನು ಕಾಪಿಡಲು |
ಮೇರುಪೂಜೆಯನೊಂದ ನಾಗೈವೆನೆನುತ ||
ವಾರಿಜೋದ್ಭವ ತಾನು ಸುರರಿಗಾಹ್ವಾನವನು |
ಚಾರು ತೋಷದೊಳಿತ್ತು ಬರನಿರೀಕ್ಷೆಯಲಿ ||74||

---

**{ಮೇರು ಪೂಜೆ = ಮಹಾಪೂಜೆ}**

**ಬೇಗಡೆ - ಏಕ**
ಇತ್ತ ಬನ್ನಿರಿ ಸುಜನ ವಂದಿತರೆ | ಸನ್ಮಾರ್ಗ ತೋರುವ |
ಉತ್ತಮೋತ್ತಮ ಗುಣವಿಭೂಷಿತರೆ ||
ಸತ್ಯಲೋಕದೊಳೆಸೆವ ಪೂಜೆಯ |
ನಿತ್ತಿರುವುದಕೆ ಬಂದಿರೆಲ್ಲರು |
ಚಿತ್ತತೋಷವ ನಾಂತುದೀಕ್ಷಣ |
ಸುತ್ತಲಿಹ ವಿಷ್ಟರವನೇರಿರಿ ||75||

ಭೂವರೇಣ್ಯನೆ ಬಂದುದೊಳಿತೆನುತ | ವಾಣೀಶ ದಯೆಯಿಂ |
ಕೋವಿದಗೆ ಪೀಠವನು ಕರುಣಿಸುತ ||
ಈ ವಿಧದ ಘನಪೂಜೆಯೊಳು ನೀ |
ದೇವಜಾಲವ ಸೇರಿ ಕುಳಿತಿಹೆ |
ಸಾವಧಾನದೊಳೀಕ್ಷಿಸೆಂದೆನು |
ತಾವಿರಿಂಚಿಯು ಪೇಳ್ದ ಮೋದದಿ ||76||

**ಭಾಮಿನಿ (ಅರ್ಧ)**
ಸುರಪ ವರುಣ ಕುಬೇರಮುಖ್ಯರು |
ಹರುಷದಿಂ ನೆರೆದಿರ್ಪ ರಂಗಕೆ ||
ಸುರತರಂಗಿಣಿ ಬಂದು ಕಮಲಜನಂಘ್ರಿಗೊಂದಿಸುತ ||77||

**ವಾರ್ಧಕ (ಅರ್ಧ)**
ಹಾವಭಾವ ವಿಲಾಸ ಚಿತ್ತಶುದ್ಧಿದೃಷ್ಟಿ |
ಕೋವಿದಕಲಾವಿದರಿಗತಿ ಮುಖ್ಯ ಕರಚರಣ |
ಜೀವಂತವೆನಿಸುತಲಿ ಸಮ್ಮೋಹಗೊಳಿಸುವುದೆ ನಾಟ್ಯವೆಂಬಾರಾಧನೆ ||78||

**ಏಕ**
ಪುರಹರ ಶಶಿಧರ ಗಜಚರ್ಮಾಂಬರ |
ವರನಟಶೇಖರ ಭಕ್ತಪರ ||ಪ||
ಡಮರು ನಿನಾದಕೆ ತಾಂಡವ ನರ್ತನ |
ಹಿಮಗಿರಿ ವಾಸವು ಶಿಖಿನಯನ ||
ತಾಳ ಮೃದಂಗದ ಮೇಳದಿ ನೂಪುರ |
ಫಾಲಾಕ್ಷನಿಗಾ ಫಣಿಹಾರ ||79||

**ವಾರ್ಧಕ**
ಸುರನದಿಯು ತೋಷದಿಂ ನರ್ತಿಸುತ ಮೈಮರೆಯೆ |
ಸೆರಗು ಜಾರಿದುದು ಬೀಸುವ ಪವನನಬ್ಬರಕೆ |
ಬೆರಗುಗೊಳ್ಳುತ ಸುರರತಿಂತಿಣಿಯಧೋವದನಗೊಂಡುದತಿ ಸಿಗ್ಗಿನೊಳಗೆ ||
ಧರಣಿಪಾಲಕ ನೆಟ್ಟದೃಷ್ಟಿಯಿಂ ಸುದತಿಯನು |
ಪರಿಕಿಸಲ್ಕಿದನೆಲ್ಲವಗ್ರಾಸನದೊಳಿರುವ |
ಶರಜಸುತ ಕಾಣುತಲಿ ಕಿಡಿಕಾರಿ ವಿಷ್ಟರವ ತೊರೆಯುತ್ತ ಕೋಪತಾಳಿ ||80||

(ಇಲ್ಲಿ ಗಂಗೆಯ ನಾಟ್ಯದ ಅಂತ್ಯದ ವೇಳೆಗೆ ಆಕೆಯ ಸೆರಗು ಜಾರಿದ ಅಭಿನಯ ತೋರ್ಪಡಿಸಬೇಕು. ಆ ಕ್ಷಣಕ್ಕೆ ಅವನು ಗಂಗೆಯ ಅರೆನಗ್ನ ಶರೀರವನ್ನು ನೆಟ್ಟದೃಷ್ಟಿಯಿಂದ ಕಾಣಬೇಕು. ಅವಳಲ್ಲಿಯೂ ಕಾಮಸಂಚಾರವಾಗಬೇಕು. ಆ ಸಂದರ್ಭಕ್ಕೆ ಸರಿಯಾಗಿ ಬ್ರಹ್ಮನಿಂದ ಶಾಪ)

**ಸೌರಾಷ್ಟ್ರ - ತ್ರಿವುಡೆ**
ಎಲವೆಲವೊ ದುರ್ಮತಿಯೆ ನೀ ನೀ |
ಜಲಜಸಂಭವ ಸಭೆಯೊಳೀತೆರ ||
ಲಲನೆ ನಗ್ನಶರೀರ ಕಂಡೆಯ | ತೊಲಗು ಭುವಿಗೆ ||81||

ಸುರರೊಡನೆ ಸೇರುತ್ತಲೀದಿನ |
ಸ್ಮರಹತಿಗೆ ಮನಗೊಟ್ಟು ನಿಂದೆಯ ||
ಸರಸಿಜಾಕ್ಷಿಯ ಬೆರೆತುಬಾಳ್ಳೈ | ಧರಣಿಯೊಳಗೆ ||82||

ಏನನರಿತಿಹೆ ಸತ್ಯಲೋಕವ |
ಹೀನ ನಿನ್ನಂಥವಗೆ ಲಭಿಸದು ||
ಮಾನಿನಿಯ ಮೋಹವನು ಪೊತ್ತಿಹ | ನೀ ನಗಣ್ಯ ||83||

ಲಲನೆಗಂಗೆಯ ನಗ್ನಕಾಯವ |
ಖಳತನದಿ ಕಂಡುದಕೆ ಶಾಪವ ||
ಬೆಲೆಯರೂಪದೊಳೀವೆ ತೊಲಗೈ | ಹುಲುನೃಪಾಲ ||84||
ನಳಿನಲೋಚನೆ ಗೈವಕಾರ್ಯವ |
ನಿಳೆಯೊಳಗೆ ನೀ ಸಹಿಸಿಕೊಳುತಲಿ ||
ಉಳಿಯದಂದದಿ ಬದುಕ ಸಾಗಿಸು | ತೊಲಗುತೊಲಗು ||85||

**ಕೇದಾರಗೌಳ - ಝಂಪೆ**
ಅಂದಣವನೇರ್ದ ಸೊಣಗ | ಹೊಲಸ ತಾ |
ಪಿಂದಿನೋಲ್ ತಿನಲೋಸುಗ ||
ಮುಂದೆ ಸಾಗಿದ ತೆರದಲಿ | ನೃಪತಿ ನಿ |
ನ್ನಂದಗೆಟ್ಟಿತು ಸಭೆಯಲಿ ||86||

ಚರಿಸಿದನೆ ಮನದಿ ಭೂಪ | ಕಾಮಿನಿಯೆ |
ಸುರರಿದಿರಿಗೀವೆ ಶಾಪ ||
ಧರೆಯಸೇರತಿ ಶೀಘ್ರದಿ | ಪೊಡವಿಪನ |
ಬೆರೆತು ಬದುಕಿನ್ನು ಜಗದಿ ||87||

ಸೆರಗು ಜಾರಿದುದಲ್ಲವು | ನಾಟ್ಯದಿಂ |
ಹರಿಸುತೆಯ ಚಾರಿತ್ರ್ಯವು ||
ತರುಣಿ ವಸ್ತ್ರದ ತೆರದೊಳು | ಹರಿಯುವಳು |
ನಿರತ ಸತ್ಯವು ಜಗದೊಳು ||88||

ಅರಿತಿಹೆನು ನಾ ನಿಮ್ಮಯ | ಮಾನಸದಿ |
ಸ್ಮರಭಾವವಿರುವ ಪರಿಯ ||
ವರವಿರಿಂಚಿಯ ಸಭೆಯಲಿ | ಕಾಮವನು |
ಚರಿಸಬಿಟ್ಟಿರೆ ಮದದಲಿ ||89||

**ಭಾಮಿನಿ (ಅರ್ಧ)**
ನಾಲ್ಮೊಗನ ಕಡುಶಾಪದಿಂದಾ |
ನೀಲಲೋಚನೆ ಮೂರ್ಛೆಗೊಳ್ಳಲು |
ಭೂಲಲಾಮನು ಕರವಜೋಡಿಸುತಜನ ನುತಿಸಿದನು ||90||

**ನಂದಕ ವೃತ್ತ**
ಕರುಣಸಿಂಧುವೆ | ಮನ್ನಿಸೆನ್ನನು ||
ಅರಿಯದಾಗಿಹ | ತಪ್ಪಿಗೀಪರಿ ||
ಕೆರಳಿಶಾಪವ | ನಿತ್ತುದೇನಿದು ||
ಶರಣನೆನ್ನನು | ಪೊರೆಯಲಾರೆಯ ||91||

ಕಮಲಸಂಭವ | ವಿಮಲಕೋಮಲ ||
ಸಮತೆ ಮೀರುತ | ಗಮಿಸಿತೀಮನ ||
ವಿಮುಖನಾಗಿಸು | ಅಮರ ಶಾಪದಿ ||
ಕ್ಷಮಿಸು ದೇವನೆ | ನಮಿಪೆ ದೈನ್ಯದಿ ||92||

ಲೋಕ ಬೇರೆಯೊ | ವ್ಯಕ್ತಿ ನಾನೆಯೊ ||
ಪೋಕರಂದದಿ | ಗೈಯ್ಯಲೆನ್ನಯ ||
ಲೋಕಸಹಜತೆ | ಮೂಲವಾಯಿತು ||
ಸಾಕು ಕೋಪವು | ದಯೆಯ ತೋರ್ವುದು ||93||

**ಸುರುಟಿ - ಏಕ**
ಮರುಗದಿರೆಲೊ ಭೂಪ | ಕೋಪದಿ |
ಸ್ಫುರಿಸಿದುದೀ ಶಾಪ ||
ತರುಣಿಯ ಮಾತನು | ತೊರೆಯುವ ಗಳಿಗೆಯು |
ಉರುತರ ಶಾಪಕೆ | ಖರೆಯೈ ಮುಕ್ತಿಯು ||94||

ಕಾಮದ ಲೇಪದಲಿ | ನಿಂದಿಹೆ |
ಭೂಮಿಪನೂರ್ಧ್ವದಲಿ ||
ನೀ ಮನವಿರಿಸುತ ನಾಕವಿಲಾಸದಿ |
ಸಾಮದಿ ರಚಿಸಿದೆ ಘನತೆರದಧ್ವರ ||95||

ಯಾಗವ ರಚಿಸಿದುದು | ನಿನ್ನಯ |
ಭೋಗದ ವಾಂಛೆಯದು ||
ಸಾಗೈ ಸುಮನಸ | ನಾಗುವ ಘನತೆಯ |
ನೀ ಗಳಿಸೈ ಜಗ | ದಾಗರಡಿಯೊಳೂ ||96||

(ಇಲ್ಲಿ ಬ್ರಹ್ಮ, ತರುಣಿಯ ಮಾತನ್ನು ತೊರೆಯುವ ಗಳಿಗೆಯು 'ನಿಮ್ಮೀರ್ವರ ಕಾಮಬಂಧಕ್ಕೆ ಮುಕ್ತಿ' ಎಂಬುದಾಗಿಯೇ ತಿಳಿಸಬೇಕು. ಇದರಿಂದ ಗಂಗೆ ಪುನಹ ನಾಕ ಸೇರುತ್ತಾಳೆ. ಆದರೆ ಮಹಾಭಿಷ (ಶಾಂತನುವಾದ ನಂತರ) ಇನ್ನೂ ಕೆಲಕಾಲ ಭುವಿಯಲ್ಲಿಯೇ ಬದುಕಿರುತ್ತಾನೆ. ಆತ ಮತ್ತೆ ಪುನಃ ನಾಕ ಸೇರಿದ ಸಂಗತಿ ಲಭ್ಯವಿಲ್ಲ. ಹಾಗೆಯೇ ಸೇರಿಲ್ಲವೆಂದೂ ತಿಳಿಸಲು ಸಾಧ್ಯವಿಲ್ಲ. ಹಾಗಾಗಿ ಶಾಪಮುಕ್ತಿಯನ್ನು ಕಾಮಬಂಧಮುಕ್ತಿ ಎನ್ನುವುದು ಸರ್ವಯೋಗ್ಯ ಹಾಗೂ ಆ ಕ್ಷಣಕ್ಕೆ ಅವರಿಬ್ಬರಲ್ಲಿ ಕಾಮ ಸಂಚಾರವಾಗಿದ್ದಕ್ಕೆ ಭೂಮಿಯಲ್ಲಿ ಸತಿಪತಿಗಳಾಗಿ ಅದನ್ನು ಪೂರೈಸಿಕೊಂಡು ನಂತರ ಅವರಿಬ್ಬರಲ್ಲಿ ಉಂಟಾದ ಕಾಮದಿಂದ ಮುಕ್ತಿಪಡೆಯುವುದು ಎಂಬ ಅರ್ಥದಿಂದಲೂ ಈ ತೆರದ ಸೂಚನೆ ಸರಿಯೆನಿಸಬಹುದು. ಹುಟ್ಟಿದ ಕಾಮವನ್ನು ಲೋಕ ಒಪ್ಪುವ ಗಂಡಹೆಂಡಿರ ಸಂಬಂಧದ ಮೂಲಕ ಪಡೆಯಲು, ಮುಂದಿನ ಶುಭಕಾರ್ಯಕ್ಕೆ ಇದು ಮುನ್ನುಡಿ, ವೇದಿಕೆ ಎಂದೂ ತಿಳಿಸುವುದು)

**ಮಧುಮಾಧವಿ - ತ್ರಿವುಡೆ**
ಆವ ರಾಯನ ಮಡಿಲೊಳಾಡಲಿ |
ಈ ವಿಧಿಯ ಕಡುಶಾಪ ಧರಿಸಿ ||
ದೇವಪೇಳೆನಗೆಲ್ಲ ಬಾಳಿನ |
ನೋವುಗಳ ಸಂಹರಿಸುತ ||97||

**ವಾರ್ಧಕ**
ಹೊನ್ನ ಕನಸುಗಳ ಕಾಣುತ್ತ ಸಶರೀರದಿಂ |
ಸನ್ನುತರ ಲೋಕಕ್ಕೈತಂದ ಗುಣಸಂಪನ್ನ |
ನಿನ್ನೇಕೆ ಚಿಂತೆಯೈ ತೋರ್ವೆ ದಾರಿಯನೊಂದ ಬಳಿಕ ಶುಭನಿನಗಪ್ಪುದು ||
ಅನ್ವಯದಿ ಕೀರ್ತಿವೆತ್ತಿಹ ಗಗನಮಣಿ ಕುಲದಿ |
ಮುನ್ನ ಜನಿಸಿದೆ ಮುಂದೆ ಸೋಮವಂಶದೊಳುದಿಸು |
ಚಿಣ್ಣನಾಗುತ್ತ ಪೃಥ್ವೀಶ್ವರ ಪ್ರತೀಪಂಗೆ ಶಾಂತನುವೆನಿಪ್ಪ ಪೆಸರಿಂ ||98||

ಕೇಳು ಕೇಳ್ ವಾರಿರುಹಸನ್ಮಿತ್ರಕುಲಜಾತ |
ಭೂಲೋಕದೊಳು ಮುಂದೆ ನೀವೀರ್ವರುಂ ಜನಿಸಿ |
ಲೀಲೆಯೊಳು ಬೆರೆತು ಮೂಜಗವು ಮನ್ನಿಸುವ ತೆರದಿಂ ತಣಿಸಿ ಮಾರನುರಿಯಂ ||
ನಾಳೆ ಹಬ್ಬಲಿಹ ಶಶಿವಂಶವಲ್ಲರಿಗಿಂದು |
ಭೂಲೋಲ ನೀ ಪಡೆದ ಶಾಪವಿದು ಮುನ್ನುಡಿಯು |
ತಾಳದಿರು ಮನದೊಳಗೆ ದುಃಖಮಂ ಸಾಧಿಸುವ ನಿನಗೆನ್ನ ಕೃಪೆಯಿರ್ಪುದು ||99||

**ಭಾಮಿನಿ (ಅರ್ಧ)**
ಭಾವಶೂನ್ಯದಿ ಭಗ್ನಮಾನಸ |
ಭೂವಲಯ ಸೇರಲ್ಕೆ ಗಂಗೆಯು |
ಸಾವರಿಸಿಕೊಂಡೇಳುತಲಿ ವಿಧಿಪಾದವನು ಪಿಡಿದು ||100||

**ನೀಲಾಂಬರಿ - ರೂಪಕ**
ಏತಕೆ ಶಪಿಸಿದೆ ಪೇಳು ವಿ | ಧಾತನೆ ತಪ್ಪಿಹುದೆಲ್ಲದ |
ನೀ ತೋರಿಸಿ ಮನವ್ಯಾಕುಲ | ಭೀತಿಯ ಪರಿಹರಿಸು ||
ಪ್ರೀತಿಯೆ ನಿನಗಿದು ಸುರರಿದಿ | ರೀತೆರ ಶಪಿಸಿದುದುಚಿತವೆ |
ಮಾತಿನ ಶರದಿಂ ಹರಿಪದ | ಜಾತೆಯ ಘಾತಿಸಿದೆ ||101||

**ಭಾಮಿನಿ**
ಮರುಗಿ ದುಃಖಿಪ ಚೆಲುವೆಯಾನನ |
ಪರಿಕಿಸುತಲಂಬುರುಹಸಂಭವ |
ತರುಣಿಯಳ ಕಣ್ಣೀರ ತೊಡೆಯುತಲೀತೆರದಿ ನುಡಿದ ||
ಧರೆಯ ಸೇರಿದ ಬಳಿಕ ನಿನ್ನಯ |
ಪರಮ ಗರ್ಭಾಂಬುಧಿಯಲೋರ್ವನು |
ವರ ವಿವೇಕಿಯು ಜನಿಸಿ ಕೀರ್ತಿಯ ಪಡೆವನಿದು ದಿಟವು ||102||

**ವಾರ್ಧಕ**
ಇತ್ತಕೇಳ್ ಸುರತರಂಗಿಣಿ ನಿನ್ನ ಮಾನಸದಿ |
ಪೃಥ್ವಿಪಾಲನ ಬಗೆಗೆ ಮೋಹವದು ಮೂಡಲ್ಕೆ |
ಇತ್ತೆ ಶಾಪವ ಮರಳಿ ಶೀಘ್ರದಿಂ ಬರುವೆ ನೀನೆನುತ ಕಳುಹುತಬಲೆಯನು ||
ಸುತ್ತ ಸುರನಿಕುರುಂಬನಿರುಕಿಸುತ ಚಿಂತೆಗೇ |
ಕೊತ್ತುವುದು ಮನವ ವಿಧಿ ಸಂಕಲ್ಪವಿರೆ ಜೀವ |
ಸತ್ವರಜತಮಗುಣದಿ ಮೆರೆವುದೆನುತಲಿ ಕಥೆಗೆ ಮಂಗಳವ ಕರುಣಿಸಿದನು ||103||

**ಮಂಗಲಂ**
**ಕೇದಾರಗೌಳ - ಅಷ್ಟ**
ಮಂಗಲಂ | ಜಯ | ಮಂಗಲಂ ||ಪ||
ಧರೆಯೊಳು ಪೆಸರಾಂತ ಬಂಗಾರಮಕ್ಕಿಯ |
ವರಹನುಮಗೆ ಮಂಗಲಂ ||
ಧರಣಿ ಭಾರವ ನೀಗಿ ಸದ್ಬುದ್ಧಿ ನೀಡಿದ |
ದುರಿತಹರಗೆ ಮಂಗಲಂ ||104||

**ಸಾರಂಗ - ಅಷ್ಟ**
ಆರತಿ ಬೆಳಗುವೆನು | ಭಕ್ತಿಯ ತಳೆ |
ದಾರತಿ ಬೆಳಗುವೆನು ||
ವಾರಿಜನಾಭಗೆ | ವಾರಿಜೋದ್ಭವನಿಗೆ |
ಮಾರಸಂಹಾರಿಗೆ | ಶ್ರೀರಾಮಚಂದ್ರಗೆ ||105||

ಶಾರದೆ ದಯೆದೋರಿದೆ | ಬಾಲನ ಮತಿ |
ಸೇರುತ್ತ ಬಲ ನೀಡಿದೆ ||
ಧಾರಿಣಿಯೊಳಗೆನ್ನ | ಸೇರಿ ರಕ್ಷಿಸು ತಾಯೆ |
ತೋರದು ಹಾದಿಯು | ಬಾರದೆ ನೀನಿರೆ ||106||

**ಸಾಂಗತ್ಯ - ರೂಪಕ**
ಮುರಹರ ಪುರಹರ ಸರಸತಿ ಪ್ರಿಯವರ |
ಧರಣಿಪ ರಘುವರ ಶರಣು ||
ಗಿರಿಜೆಯ ಸುತನಿಗೆ ಮಾರುತಜಾತಗೆ |
ಸಿರಿದೇವಿ ಭೂದೇವಿ ಶರಣು ||107||

**ತ್ರಿಪದಿ**
ಅಂಡಜ ಸ್ವೇದಜ ಯೋನಿಜ ಜೀವಿಯ |
ಕಂಡು ರಕ್ಷಿಸುವ ದೇವನೆ ಎಮ್ಮನು |
ಪಂಡಿತರೆನಿಸಿ ಮೆರೆಸಯ್ಯ ||108||

**ಕೇದಾರಗೌಳ - ಅಷ್ಟ**
ಮಂಗಲವಾಗಲಿ ಮತಿಯ ಮೌಢ್ಯವು ನೀಗಿ |
ಮಂಗಲ ಜಗಕಾಗಲಿ ||
ಮಂಗಳಾರತಿ ಮಾಡಿ ಮಂಗಳಬೇಡಿದ |
ರಂಗನೆಯರು ಮುದದಿ ||109||

**ದ್ವಿಪದಿ**
ಈ ಕಥೆಯೊಳಿರುವ ಘನಸಂದೇಶವರಿತು |
ಲೋಕದೊಳು ಬಾಳಿರೈ ಸಕಲರೊಳು ಬೆರೆತು ||110||

**ವಾರ್ಧಕ (ಅರ್ಧ)**
ದೊರೆ ಮಹಾಭಿಷನ ಜೀವನಕಥನ ಸರಸತಿಯ |
ಕರುಣೆಯಿಂ ಭಾರತವನವಲೋಕಿಸುತ ಬರೆದೆ ||
ಧರಣಿಯೊಳಗಳಗೋಡು ಶಿವಕುಮಾರನ ಕೃತಿಯು ಮೆರೆವ ತೆರ ತಾಯಿ ಪೊರೆಯೆ ||111||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ೨೦೧೭ರಲ್ಲಿ ಕವಿಯಿಂದ ಪ್ರಕಟಿತ ಕೃತಿ

**ಪ್ರಸಂಗ ಪ್ರತಿ ಆಧಾರ:** ಲೇಖಕರೇ ಒದಗಿಸಿದ ವಿದ್ಯುನ್ಮಾನ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಶಿವಕುಮಾರ ಬಿ.ಎ ಅಳಗೋಡು

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಶಿವಕುಮಾರ ಬಿ.ಎ ಅಳಗೋಡು

**ಅಂತರಜಾಲ ಪ್ರತಿ ಬರವಣಿಗೆ:** ಶಿವಕುಮಾರ ಬಿ.ಎ ಅಳಗೋಡು

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ